# ಅನುಬಂಧ 1

# ಮಾರ್ಪಡುವಿಕೆಯ ದೈವಿಕ ಕಾರ್ಯ

*"ಪ್ರತಿಯೊಂದು ಅಂತಿಮವಾಗಿ ದೇವರ ಕೃಪೆಯ ಮೇಲೆ ಅವಲಂಭಿಸಿರುತ್ತದೆ. ಆತನ ಕೃಪೆಯು ರಕ್ಷಣೆಯ ಮೂಲವು ಮತ್ತು ಕಾಪಾಡುವ ಬಲ ಮತ್ತು ರಕ್ಷಣೆಯ ಪ್ರೇರೇಪಿಸುವಿಕೆಯೂ ಆಗಿದೆ."*

ಒಬ್ಬ ಪಾಪಿಯು ಕ್ರೈಸ್ತನಾಗುವದನ್ನು ಆಯ್ಕೆಮಾಡಿಕೊಳ್ಳುವಾಗ ದೇವರು ಅವನಿಗಾಗಿ ಏನು ಮಾಡುವನು? ಪಾಪಿಯನ್ನು ರಕ್ಷಣೆಯೊಳಗೆ ತರುವಂತೆ ಆತನು ಯಾವ ದೈವಿಕ ಕಾರ್ಯಗಳನ್ನು ಮಾಡುವನು? ಕ್ರಿಸ್ತನ ದೇಹವನ್ನು, ಇಲ್ಲವೇ ಸಭೆಯನ್ನು ನಾವು ಪ್ರವೇಶಿಸುವಾಗ ನಮಗಾಗಿ ದೇವರು ಮಾಡುವದನ್ನು ಅರ್ಥಮಾಡಿ ಕೊಳ್ಳುವಾಗ, "ಕ್ರಿಸ್ತನ ಕಡೆಗೆ ಮಾರ್ಪಡುವಿಕೆ" ಎಂದು ನಾವು ಕರೆಯುವ ಈ "ವಿಶೇಷ ಪ್ರಾರಂಭಕ್ಕಾಗಿ" ನಮ್ಮ ಮೆಚ್ಚಿಕೆಯು ಅಗಣಿತವಾಗಿ ಹೆಚ್ಚುವುದು.

ಒಬ್ಬನು ಕ್ರೈಸ್ತನಾಗುವಾಗ ದೇವರು ಕೈಕೊಳ್ಳುವ ಕಾರ್ಯಗಳ ಈ ಯಾದಿಯನ್ನು ಗಮನವಿಟ್ಟು ಅಧ್ಯಯನ ಮಾಡಿರಿ. ಪ್ರತಿಯೊಂದು ಕಾರ್ಯದ ಹೆಸರಿನ ಕೆಳಗೆ, ದೇವರು ತೆಗೆದುಕೊಳ್ಳುವ ಕಾರ್ಯವನ್ನು ಸೂಚಿಸುವ, ಪರಿಶುದ್ಧ ಬರಹದ ಒಂದು ವಚನ ವನ್ನಾದರೂ ನೀವು ಕಂಡುಕೊಳ್ಳುವಿರಿ. ಕೆಲವು ಸಂಗತಿಗಳಲ್ಲಿ, ಹಲವಾರು ವಚನಗಳು ನಮೂದಿಸಲ್ಪಟ್ಟಿರಬಹುದು, ಆದರೆ ಕಾರ್ಯವು ಸಂಭವಿಸುತ್ತದೆ ಎಂಬುದನ್ನು ಸಿದ್ಧ ಪಡಿಸಿ ತೋರಿಸಲು ಒಂದು ವಚನವು ಸಾಕಾಗುತ್ತದೆ. ಯಾದಿಯ ಪ್ರಕಾರವಾಗಿ ಒಬ್ಬನು ಕ್ರೈಸ್ತನಾಗುವಾಗ ನಮ್ಮ ಕೃಪಾಪೂರ್ಣನಾದ ದೇವರಿಂದ ನಾಲ್ವತ್ತೆರಡು ಭಿನ್ನ ವಾದ ಹಾಗೂ/ಇಲ್ಲವೇ ಸಂಬಂಧಿಸಿದ ಕಾರ್ಯಗಳು ಮಾಡಲ್ಪಡುತ್ತವೆ ಎಂಬುದನ್ನು ನೀವು ಗಮನಿಸುವಿರಿ. ಕೆಲವು ಹೆಸರುಗಳು ಒಂದರ ಮೇಲೊಂದು ಬರುತ್ತವೆ ಮತ್ತು ಒಂದೇ ಸಂಗತಿಯನ್ನು ಬೇರೆ ವಿಧದಿಂದ ಹೇಳುವಂಥವುಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಕಾರ್ಯಗಳ ಮಧ್ಯದಲ್ಲಿ ಭಿನ್ನತೆಯ ಗೆರೆಗಳು ಎಳೆಯಲ್ಪಟ್ಟಿರುವದಿಲ್ಲ. ಈ ಯಾದಿಯ ಉದ್ದೇ ಶವು ದೇವರು ನಮ್ಮನ್ನು ತನ್ನ ಕುಟುಂಬದೊಳಗೆ, ಸಭೆಯೊಳಗೆ ಸ್ವಾಗತಿಸುವಾಗ ಆತನ ಕಾರ್ಯಗಳನ್ನು ವಿವರಿಸುವ ಪರಿಶುದ್ಧ ಬರಹಗಳನ್ನು ನಮ್ಮ ಮುಂದೆ ತರುವುದಾಗಿದೆ. ಆ ಕಾರ್ಯಗಳ ವ್ಯಾಪ್ತಿಯನ್ನು ಒಂದೇ ನೋಟದಲ್ಲಿ ನಾವು ನೋಡುತ್ತೇವೆ.

**(1) ನಮ್ಮ ರಕ್ಷಕನಂತೆ ಕ್ರಿಸ್ತನು ನಮಗೆ ಕೊಡಲ್ಪಟ್ಟಿದ್ದಾನೆ.**

ತೀತ 3:5, 6

"ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪರಿಶುದ್ಧಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಕೃಪೆಯಿಂದ ... ಪರಿಶುದ್ಧಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು."

**(2) ನಾವು ಒಂದೇ ದೇಹದೊಳಗೆ ತರಲ್ಪಟ್ಟೆವು.**

1 ಕೊರಿಂಥ 12:13

"ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು."

**(3) ನಾವು ಕ್ರಿಸ್ತನನ್ನು ಧರಿಸಿಕೊಂಡಿರುವೆವು.**

ಗಲಾತ್ಯ 3:27

"ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ."

**(4) ಕ್ರಿಸ್ತನ ಮರಣದ ಲಾಭಗಳನ್ನು ನಾವು ಪಡೆದುಕೊಳ್ಳುವೆವು.**

ರೋಮಾಪುರ 6:3

"ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?"

**(5) ನಾವು ದೇವರಿಂದ ಹುಟ್ಟಿದ್ದೇವೆ.**

1 ಯೋಹಾನ 5:1

"ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ."

**(6) ಕ್ರಿಸ್ತನ ರಕ್ತದಲ್ಲಿ ನಾವು ತೊಳೆಯಲ್ಪಟ್ಟಿದ್ದೇವೆ.**

ಪ್ರಕಟನೆ 1:5, 6

"... ನಮ್ಮನ್ನು ಪ್ರೀತಿಸುವವನೂ ತನ್ನ (ಕ್ರಿಸ್ತನ) ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ... ಆತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್."

**(7) ನಾವು ರಕ್ಷಿಸಲ್ಪಟ್ಟಿದ್ದೇವೆ.**

ಮಾರ್ಕ 16:16

"ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು."

**(8) ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ.**

ಕೊಲೊಸ್ಸೆ 1:13, 14

"ದೇವರು ನಮ್ಮನ್ನು ಅಂಧಕಾರದ ಘೋರೊತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು."

**(9) ನಾವು ದೇವರ ದೃಷ್ಟಿಯಲ್ಲಿ ನೀತಿವಂತರು ಇಲ್ಲವೇ ನ್ಯಾಯವುಳ್ಳವರು ಆಗಿ ಮಾಡಲ್ಪಟ್ಟಿದ್ದೇವೆ.**

ರೋಮಾಪುರ 3:23, 24

"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕ ಆಗುವದು."

**(10) ನಮಗೆ ಬಿಡುಗಡೆಯಾಗಿದೆ.**

ಎಫೆಸ 1:7

"ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧ ಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿ ಶಯವೇ."

**(11) ನಾವು ಪಾಪದ ದಾಸತ್ವದಿಂದ ವಿಮೋಚಿಸಲ್ಪಟ್ಟಿದ್ದೇವೆ.**

ರೋಮಾಪುರ 6:17, 18

"ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ."

**(12) ನಾವು ಪ್ರತ್ಯೇಕಿಸಲ್ಪಟ್ಟಿದ್ದೇವೆ ಇಲ್ಲವೇ ಪರಿಶುದ್ಧೀಕರಿಸಲ್ಪಟ್ಟಿದ್ದೇವೆ.**

1 ಕೊರಿಂತ 6:11

"ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ."

**(13) ದೇವರ ಮಕ್ಕಳಂತೆ ನಾವು ಸ್ವೀಕರಿಸಲ್ಪಟ್ಟಿದ್ದೇವೆ.**

ಎಫೆಸ 1:5

"ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪ ಮಾಡಿದ್ದನು."

**(14) ನಾವು ಆತ್ಮಿಕವಾಗಿ ಸಜೀವಿಗಳಾಗಿ ಮಾಡಲ್ಪಟ್ಟಿದ್ದೇವೆ.**

ಎಫೆಸ 2:5

"ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು [ದೇವರು] ಕ್ರಿಸ್ತನೊಂದಿಗೆ ಬದುಕಿಸಿದನು (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ)."

**(15) ನಾವು ಕ್ರಿಸ್ತನಲ್ಲಿ ಇಡಲ್ಪಟ್ಟಿದ್ದೇವೆ.**

ಎಫೆಸ 2:7ಬಿ

"ಕ್ರಿಸ್ತಯೇಸುವಿನಲ್ಲಿರುವ ನಮ್ಮನ್ನು (ದೇವರು) ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ."

**(16) ನಾವು ದೇವರ ಕೃಪೆಯನ್ನು ಸ್ವೀಕರಿಸುವವರಾಗಿದ್ದೇವೆ.**

ಎಫೆಸ 2:8, 9

"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ."

**(17) ನಾವು ದೇವರೊಂದಿಗೆ ಸಂಧಾನವಾಗಿದ್ದೇವೆ.**

ಕೊಲೊಸ್ಸೆ 1:19, 20

"ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳ ಬೇಕೆಂತಲೂ ನಿಷ್ಕರ್ಷೆ ಮಾಡಿದನು … ."

**(18) ನಾವು ಕ್ರಿಸ್ತನಲ್ಲಿ ಒಂದಾಗಿ ಮಾಡಲ್ಪಟ್ಟಿದ್ದೇವೆ.**

ಎಫೆಸ 2:14-16

"ನಿಮ್ಮನ್ನೂ ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿ ಹಾಕಿದನು. ಆತನು ಸಮಾಧಾನ ಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರಷನನ್ನಾಗಿ ನಿರ್ಮಿಸಿದ್ದಾನೆ; ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ."

**(19) ನಾವು ನೂತನ ಸೃಷ್ಟಿಗಳಾಗಿ ಮಾಡಲ್ಪಟ್ಟಿದ್ದೇವೆ.**

2 ಕೊರಿಂಥ 5:17

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು.

ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."

**(20) ನಾವು ದೇವರಿಗೆ ಬಾಧ್ಯಸ್ಥರಾಗಿ ಮಾಡಲ್ಪಟ್ಟಿದ್ದೇವೆ.**

ರೋಮಾಪುರ 8:17

"ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು."

**(21) ನಮ್ಮ ಅಂತರ್ಯದಲ್ಲಿ ದೈವತ್ವವು ವಾಸಿಸುತ್ತದೆ.**

**ಆತ್ಮನು ಅಂತರ್ಯದಲ್ಲಿ ವಾಸಿಸುವನು**

ಗಲಾತ್ಯ 4:6

"ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು."

**ದೇವರು ಅಂತರ್ಯದಲ್ಲಿ ವಾಸಿಸುವನು**

1 ಯೋಹಾನ 4:15

"ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ, ಅವನು ದೇವರಲ್ಲಿ ನೆಲೆಗೊಂಡಿದ್ದಾನೆ."

**ಕ್ರಿಸ್ತನು ಅಂತರ್ಯದಲ್ಲಿ ವಾಸಿಸುವನು**

ಯೋಹಾನ 14:23

" 'ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಆವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.' "

**(22) ಎಲ್ಲಾ ಆತ್ಮಿಕ ಆಶೀರ್ವಾದಗಳು ನಮಗೆ ಕೊಡಲ್ಪಟ್ಟಿವೆ.**

ಎಫೆಸ 1:3

"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ."

**(23) ನಾವು ದೇವರ ರಾಜ್ಯದ ಪ್ರಜೆಗಳಾಗಿ ಮಾಡಲ್ಪಟ್ಟಿದ್ದೇವೆ.**

ಯೋಹಾನ 3:3

"ಅದಕ್ಕೆ ಯೇಸು - ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು."

**(24) ನಾವು ಅಪರಾಧ ನಿರ್ಣಯದಿಂದ ಹೊರಗೆ ತರಲ್ಪಟ್ಟಿದ್ದೇವೆ.**

ರೋಮಾಪುರ 8:1

"ಆದದರಿಂದ ಕ್ರಿಸ್ತಯೇಸುವಿನಲ್ಲಿರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ."

**(25) ನಮಗೆ ದೇವರೊಂದಿಗೂ, ಕ್ರಿಸ್ತನೊಂದಿಗೂ ಮತ್ತು ಪರಿಶುದ್ಧಾತ್ಮನೊಂದಿಗೂ ಅನ್ಯೋನ್ಯತೆಯು ಕೊಡಲ್ಪಟ್ಟಿದೆ.**

1 ಯೋಹಾನ 1:3

"ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದು."

**(26) ನಾವು ಸತತವಾದ ಶುದ್ಧೀಕರಣದಲ್ಲಿ ಪ್ರವೇಶಿಸುತ್ತೇವೆ.**

1 ಯೋಹಾನ 1:7

"ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ."

**(27) ನಾವು ದೈವಿಕ ಸ್ವಭಾವದಲ್ಲಿ ಪಾಲುಗಾರರಾಗಲು ಶಕ್ತರಾಗಿ ಮಾಡಲ್ಪಟ್ಟಿದ್ದೇವೆ.**

2 ಪೇತ್ರ 1:4

"ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟ ವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

**(28) ನಮಗೆ ಜೀವಕರವಾದ ನಿರೀಕ್ಷೆಯು ಕೊಡಲ್ಪಟ್ಟಿದೆ.**

1 ಪೇತ್ರ 1:3

"ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾ ಕರುಣಾನುಸಾರವಾಗಿ ನಮ್ಮನ್ನು ತಿರಿಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿದ್ದಾನೆ."

**(29) ನಾವು ದೇವರ ಆಶ್ರಯದಲ್ಲಿ ತರಲ್ಪಟ್ಟಿದ್ದೇವೆ.**

1 ಪೇತ್ರ 1:3-5

"ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ ದೇವರೂ ಆಗಿರುವಾಗತನಿಗೆ ಸ್ತೋತ್ರವಾಗಲಿ. ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾ ಕರುಣಾನುಸಾರವಾಗಿ ನಮ್ಮನ್ನು ತಿರಿಗಿ ಜೀವಿಸುವಂತೆ ಮಾಡಿ

ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು. ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯ ಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ.''

**(30) ದೇವರೊಂದಿಗೆ ನ್ಯಾಯಬದ್ಧ ಸಮಾಧಾನವು ನಮಗೆ ಕೊಡಲ್ಪಟ್ಟಿದೆ.**

ರೋಮಾಪುರ 5:1

"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ.''

**(31) ದೇವರ ಅನುದಿನ ಶಾಂತಿಯು ನಮಗೆ ಕೊಡಲ್ಪಟ್ಟಿದೆ.**

ಫಿಲಿಪ್ಪಿ 4:7

"ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು.''

**(32) ಕ್ರಿಸ್ತನು ನಮಗೆ ಸಹಾಯಕನಾಗಿ ಕೊಡಲ್ಪಟ್ಟಿದ್ದಾನೆ.**

1 ಯೋಹಾನ 2:1

"ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಆ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪ ಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ.''

**(33) ನಮಗೆ ನಿತ್ಯಜೀವವು ಕೊಡಲ್ಪಟ್ಟಿದೆ.**

1 ಯೋಹಾನ 5:12

"ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.''

**(34) ಪರಲೋಕದ ದಾನದ ಅನುಭವವು ನಮಗೆ ಕೊಡಲ್ಪಟ್ಟಿದೆ.**

ಇಬ್ರಿಯ 6:4-6

"ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ ಪರಿಶುದ್ಧಾತ್ಮವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು. ...''

**(35) ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ.**

ಲೂಕ 10:20

" 'ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ.' ''

**(36) ನಾವು ದೇವರಿಂದ ಆಯ್ಕೆ ಮಾಡಲ್ಪಟ್ಟಿದ್ದೇವೆ.**

ಎಫೆಸ 1:4

"ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷ ವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು."

**(37) ನಮ್ಮ ಹೃದಯಗಳು ನಂಬಿಕೆಯಿಂದ ಶುದ್ಧೀಕರಿಸಲ್ಪಟ್ಟಿವೆ.**

ಅಪೊಸ್ತಲರ ಕೃತ್ಯಗಳು 15:9

"ಆತನು ನಮಗೂ ಅವರಿಗೂ ಏನೂ ಭೇದಮಾಡದೆ ಅವರ ಹೃದಯಗಳನ್ನು ನಂಬಿಕೆಯ ಮೂಲಕವಾಗಿ ಶುದ್ಧೀಕರಿಸಿದನು."

**(38) ನಿರ್ಜೀವ ಕೃತ್ಯಗಳಿಂದ ನಮ್ಮ ಮನಸ್ಸಾಕ್ಷಿಗಳು ಶುದ್ಧೀಕರಿಸಲ್ಪಟ್ಟಿವೆ.**

ಇಬ್ರಿಯ 10:22

"ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದು ಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ."

**(39) ದೇವರ ಮತ್ತು ಕ್ರಿಸ್ತನ ಸಮೀಪಕ್ಕೆ ನಾವು ತರಲ್ಪಟ್ಟಿದ್ದೇವೆ.**

ಎಫೆಸ 2:13

"ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿ ದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ."

**(40) ಪಾಪಾಧೀನ ಸ್ವಭಾವಕ್ಕೆ ನಾವು ಆತ್ಮಿಕ ಸುನ್ನತಿ ಹೊಂದಿದ್ದೇವೆ.**

ಕೊಲೊಸ್ಸೆ 2:11, 12

"ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೇ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ."

**(41) ನಾವು ವಾಗ್ದಾನ ಮಾಡಲ್ಪಟ್ಟ ಪರಿಶುದ್ಧಾತ್ಮ ಮುದ್ರೆಯನ್ನು ಹೊಂದಿದ್ದೇವೆ.**

ಎಫೆಸ 1:13

"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ, ಪರಿಶುದ್ಧಾತ್ಮ ನೆಂಬ ಮುದ್ರೆಯನ್ನು ಹೊಂದಿದಿರಿ."

**(42) ಕ್ರಿಸ್ತನು ನಮಗೆ ತಿಳಿಯಪಡಿಸಲ್ಪಟ್ಟನು.**

ಯೋಹಾನ 14:21

“ ‘ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು, ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿ ಕೊಳ್ಳುವೆನು.’ ”

© 2009 Truth for Today

# ಅನುಬಂಧ 2

# ಮಾರ್ಪಡುವಿಕೆಯ ಮಾನವ ಕಾರ್ಯ

*“ದೇವರ ಕೃಪೆಯನ್ನು ಹೊಂದಿಕೊಳ್ಳಲು ಉತ್ತರವು ಕೊಡತಕ್ಕದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕೊಡಲ್ಪಡಬೇಕಾದ ಉತ್ತರದ ಬಗ್ಗೆ ಕೆಲವರು ಒಪ್ಪಿಕೊಳ್ಳುವದಿಲ್ಲ. ಇದಕ್ಕೆ ಪರಿಹಾರವಾಗಿದೆಯೋ? ಹೌದು, ಯಾವ ಉತ್ತರ ಕೊಡಬೇಕು ಎಂಬುದರ ಬಗ್ಗೆ ಬೈಬಲು ನಮಗೆ ಉತ್ತರ ಕೊಡತಕ್ಕದ್ದು.”*

ಒಬ್ಬನು ಕ್ರೈಸ್ತನಾಗಲು ಪಾಪಿಯು ಯಾವ ಕಾರ್ಯಗಳನ್ನು ಕೈಕೊಳ್ಳಬೇಕು? ರಕ್ಷಣೆಯನ್ನೂ ದೇವರ ಕೃಪೆಯನ್ನೂ ಸ್ವೀಕರಿಸಲು ಅವನು ಏನು ಮಾಡಬೇಕು?

ಹೇಗೆ ಕ್ರೈಸ್ತನಾಗಬೇಕು ಎಂಬುದರ ಬಗ್ಗೆ ಇರುವ ಹೊಸ ಒಡಂಬಡಿಕೆಯ ಬೋಧನೆಗಳನ್ನು ‘‘ಕಾರ್ಯಗಳು’’ ಇಲ್ಲವೇ ‘‘ಹೆಜ್ಜೆಗಳು’’ ಎಂದು ಕರೆಯಬಹುದು. ಸುವಾರ್ತೆಗೆ ಈ ಪ್ರತಿಕ್ರಿಯೆಗಳು, ಪಾಪಿಯು ರಕ್ಷಿಸುವ, ದೇವರ ದೈವಿಕ ಕಾರ್ಯವನ್ನು ಹೊಂದುವವನಾಗುವ ಸಾಧನಗಳನ್ನು ಒಳಗೊಂಡಿರುವವು. ರಕ್ಷಣೆಯ ಗತಿಯಲ್ಲಿ ಪಾಪಿಯು ನಿಷ್ಕ್ರಿಯನಾಗಿರುವದಿಲ್ಲ. ನಮ್ಮ ರಕ್ಷಣೆಗೆ ಮೂಲನಾದ ದೇವರು, ಅವನನ್ನು ರಕ್ಷಿಸುವನು ಎಂಬುದು ಸತ್ಯವಾಗಿದೆ, ಆದರೆ ಪಾಪಿಯು ದೇವರ ರಕ್ಷಣೆಯನ್ನು *ಸ್ವೀಕರಿಸತಕ್ಕದ್ದು* ಮತ್ತು ಅದರಲ್ಲಿ ನಡೆಯತಕ್ಕದ್ದು.

ಕಾರ್ಯಗಳ ಯಾದಿಯನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ. ಈ ಕಾರ್ಯಗಳನ್ನು ತೆಗೆದು ಕೊಳ್ಳಬೇಕೆಂದು ದೃಢಪಡಿಸುವ ಪರಿಶುದ್ಧ ಬರಹಗಳನ್ನು ಪ್ರತಿಯೊಂದು ಕಾರ್ಯದ ಕೆಳಗೆ ಯಾದಿ ಮಾಡಿರುವದನ್ನು ಕಂಡುಕೊಳ್ಳುವಿರಿ. ಈ ಯಾದಿಯ ಪ್ರಕಾರ ಕ್ರಿಸ್ತನ ವಿಮೋಚನೆಯನ್ನು ಸ್ವೀಕರಿಸಲು ಹದಿನಾಲ್ಕು ಭಿನ್ನವಾದ ಹೆಜ್ಜೆಗಳನ್ನು ಇಡಬೇಕು ಮತ್ತು/ಇಲ್ಲವೇ ಕಾರ್ಯಗಳನ್ನು ಮಾಡಬೇಕು. ಯಾದಿಯು ಎರಡು ಭಾಗಗಳಲ್ಲಿ - ಸಾಮಾನ್ಯ ಉತ್ತರಗಳು ಮತ್ತು ಖಚಿತವಾದ ಉತ್ತರಗಳು ಎಂದು ವಿಭಾಗಿಸಲ್ಪಟ್ಟಿವೆ. ಸಂಭವಿಸುವ ಕಾರ್ಯಗಳು ಒಂದರ ಮೇಲೊಂದು ಬೀಳುವುದು ಸಹಜವಾಗಿದೆ.

ಕೆಲವು ಸಲ, ವೈಯಕ್ತಿಕ ಇಲ್ಲವೇ ನಿರ್ದಿಷ್ಟವಾದ ಹೆಜ್ಜೆಯು ಪ್ರೇರೇಪಿಸಲ್ಪಟ್ಟ ಲೇಖಕನಿಂದ ಉಪಲಕ್ಷಣದಂತೆ, ಇಡೀಯಾದದ್ದಕ್ಕೆ ಭಾಗದಂತೆ ಮಾಡುವಾಗ ಉಪಯೋಗಿಸುತ್ತಾನೆ. ಉದಾಹರಣೆಯಾಗಿ, “ನಂಬಿಕೆ” ಎಂಬ ಪದವು ರಕ್ಷಣೆಗಾಗಿ ಅವಶ್ಯವಾಗಿರುವ ಮಾನವ ಪ್ರತಿಕ್ರಿಯೆಯ ಸಂಪೂರ್ಣತೆಗಾಗಿ ಹೆಚ್ಚು ಸಲ ಉಪಯೋಗಿಸಲ್ಪಟ್ಟಿದೆ ಇದು ಮಾಡಲ್ಪಡುವಾಗ, ಲೇಖಕನು “ನಂಬಿಕೆ” ಎಂಬುದನ್ನು ಅವಶ್ಯವಾಗಿರುವ ಎಲ್ಲಾ ಮಾನವ

ವಿಧೇಯತೆಯ ಸಾರಾಂಶದಂತೆ ಉಪಯೋಗಿಸುತ್ತಾನೆ ಒಂದು ಕಾರ್ಯವು ಹಾಗೆ ಉಪಯೋಗಿಸಲ್ಪಟ್ಟಾಗ, ಕೃತ್ಯವು ಅಲಂಕಾರಿಕವಾಗಿ, ಪಾಪಿಯು ತೆಗೆದುಕೊಳ್ಳಬೇಕಾದ ಎಲ್ಲಾ ಕಾರ್ಯಗಳನ್ನು ಒಳಗೊಂಡಿರುತ್ತದೆ. ಇತರ ಕಾರ್ಯಗಳು ಒಂದು ಕೃತ್ಯದಲ್ಲಿ ಗ್ರಹಿಸಲ್ಪಟ್ಟಿರುತ್ತವೆ. ಈ ರೀತಿಯಲ್ಲಿ ಒಂದು ಕೃತ್ಯದಲ್ಲಿ ಗ್ರಹಿಸಲ್ಪಟ್ಟಿರುತ್ತವೆ. ಈ ರೀತಿ ಯಲ್ಲಿ ಒಂದು ಕಾರ್ಯವನ್ನು ಉಪಯೋಗಿಸುವ ವಚನಗಳನ್ನು ಗಮನಿಸಿರಿ.

## ಸಾಮಾನ್ಯ ಉತ್ತರಗಳು

**(1) ನಾವು ಕ್ರಿಸ್ತನ ಬಳಿಗೆ ಬರಬೇಕು.**

ಮತ್ತಾಯ 11:28-30

“ ‘ಎಲೈ, ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು.’ ”

ಪ್ರಕಟನೆ 22:17

“ಆತ್ಮನೂ ಮದಲಗಿತ್ತಿಯೂ - ‘ಬಾ’ ಅನ್ನುತ್ತಾರೆ. ಕೇಳುವವನು - ‘ಬಾ’ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ.”

**(2) ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು.**

ಅಪೊಸ್ತಲರ ಕೃತ್ಯಗಳು 2:40

“ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿನುಡಿದು - ವಕ್ರ ಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು.”

**(3) ನಾವು ವಿಧೇಯರಾಗಬೇಕು.**

ರೋಮಾಪುರ 6:17, 18

“ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರ ವಾಗಲಿ.”

**(4) ನಾವು ವಾಕ್ಯವನ್ನು ಸ್ವೀಕರಿಸಬೇಕು.**

ಅಪೊಸ್ತಲರ ಕೃತ್ಯಗಳು 2:41

“ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ

ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು."

**(5) ನಾವು ವಾಕ್ಯದಲ್ಲಿ ನೆಲೆಗೊಂಡಿರಬೇಕು.**

ಯೋಹಾನ 8:31, 32

" 'ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ - ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದು ಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು ಎಂದು ಹೇಳಿದನು.' "

**(6) ನಾವು ಪಾಪಕ್ಕೆ ಸಾಯಬೇಕು.**

ರೋಮಾಪುರ 6:1, 2

"ಹಾಗಾದರೆ ನಾವು ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ?"

**(7) ನಾವು ನೂತನ ಸ್ವಭಾವವನ್ನು ಧರಿಸಿಕೊಳ್ಳಬೇಕು.**

ಕೊಲೊಸ್ಸೆ 3:10

"ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ."

## ಖಚಿತವಾದ ಉತ್ತರಗಳು

**(1) ದೇವರ ವಾಕ್ಯಕ್ಕೆ ನಾವು ಕಿವಿಕೊಡಬೇಕು.**

ಅಪೊಸ್ತಲರ ಕೃತ್ಯಗಳು 18:8

"ಸಭಾಮಂದಿರದ ಅಧ್ಯಕ್ಷನಾದ ಕ್ರಿಸ್ಪನು ತನ್ನ ಮನೆಯವರೆಲ್ಲರ ಸಹಿತ ಕರ್ತನಲ್ಲಿ ನಂಬಿಕೆಯಿಟ್ಟನು. ಮತ್ತು ಕೊರಿಂಥದವರಲ್ಲಿ ಅನೇಕರು ಕೇಳಿ ನಂಬಿ ಬಾಪ್ತಿಸ್ಮ ಮಾಡಿಸಿಕೊಂಡರು."

ರೋಮಾಪುರ 10:17

"ಆದುದರಿಂದ ನಂಬಿಕೆಯು ಕೇಳುವದರಿಂದ ಬರುವುದು; ಮತ್ತು ಕೇಳುವಿಕೆಯು ಕ್ರಿಸ್ತನ ವಾಕ್ಯದಿಂದ ಬರುವುದು."

**ನಾವು ಕೇಳುವದಕ್ಕೆ ಕಿವಿಗೊಡುವದರಿಂದ**

ಅಪೊಸ್ತಲರ ಕೃತ್ಯಗಳು 17:11

"ಆ ಸಭೆಯವರು ಥೆಸಲೊನೀಕದವರಿಗಿಂತ ಸದ್ಗುಣವುಳ್ಳವುರಾಗಿದ್ದು ದೇವರ ವಾಕ್ಯವನ್ನು ಸಿದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರ ಗ್ರಂಥಗಳನ್ನು ಶೋಧಿಸುತ್ತಿದ್ದರು."

1 ಥೆಸಲೊನೀಕ 5:21
“ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ.”

**ನಾವು ಹೇಗೆ ಕೇಳಿಸಿಕೊಳ್ಳುತ್ತೇವೆ ಎಂಬುದರ ಕಡೆಗೆ ಗಮನ ಕೊಡುವದರಿಂದ**
ಮತ್ತಾಯ 7:24
“ ‘ಆದದರಿಂದ ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು.’ ”

ಮತ್ತಾಯ 13:9
“ ‘ಕಿವಿಯುಳ್ಳವನು ಕೇಳಲಿ.’ ”

**(2) ನಾವು ನಂಬಬೇಕು.**
ರೋಮಾಪುರ 5:1
“ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ.”

**ದೇವರಲ್ಲಿ**
ಇಬ್ರಿಯ 11:6
“ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ.”

**ಕ್ರಿಸ್ತನಲ್ಲಿ**
ಯೋಹಾನ 3:16
“ ‘ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.’ ”

**(3) ನಾವು ಮಾನಸಾಂತರ ಪಡಬೇಕು.**
ಅಪೊಸ್ತಲರ ಕೃತ್ಯಗಳು 11:18
“ಈ ಮಾತುಗಳನ್ನು ಆ ಸುನ್ನತಿಯವರು ಕೇಳಿ, ಆಕ್ಷೇಪಣೆ ಮಾಡುವದನ್ನು ಬಿಟ್ಟು - ‘ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು.’ ”

ಅಪೊಸ್ತಲರ ಕೃತ್ಯಗಳು 17:30

“ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ.”

2 ಪೇತ್ರ 3:9
“ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ.”

**(4) ನಾವು ಪುನಃ ತಿರುಗಿಕೊಳ್ಳಬೇಕು.**
ಅಪೊಸ್ತಲರ ಕೃತ್ಯಗಳು 2:38
“ಪೇತ್ರನು ಅವರಿಗೆ - ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮನ ದಾನವನ್ನು ಹೊಂದುವಿರಿ.”

ಅಪೊಸ್ತಲರ ಕೃತ್ಯಗಳು 3:19
“ಆದದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿಬಿಡುವ ಹಾಗೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ.”

**(5) ನಾವು ಕ್ರಿಸ್ತನನ್ನು ಅರಿಕೆ ಮಾಡಬೇಕು.**
ರೋಮಾಪುರ 10:10
“ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ.”

1 ಯೋಹಾನ 4:15
“ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ, ಅವನು ದೇವರಲ್ಲಿ ನೆಲೆಗೊಂಡಿದ್ದಾನೆ.”

**(6) ನಾವು ಬಾಪ್ತಿಸ್ಮ ಹೊಂದಬೇಕು.**
ಅಪೊಸ್ತಲರ ಕೃತ್ಯಗಳು 22:16
“ ‘ಈಗ ನೀನೇಕೆ ಸಾವಕಾಶಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ.’ ”

1 ಪೇತ್ರ 3:21, 22
“ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗ

ಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳು ವಂಥದೇ. ಆತನು ಪರಲೋಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನವಾಗಿವೆ."

**(7) ನಾವು ದೇವರ ನಾಮವನ್ನು ಹೇಳಿಕೊಳ್ಳುವವರಗಿರಬೇಕು.**

ಅಪೊಸ್ತಲರ ಕೃತ್ಯಗಳು 2:21

" 'ಆದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ದೇವರು ಹೇಳುತ್ತಾನೆ.' "

ಅಪೊಸ್ತಲರ ಕೃತ್ಯಗಳು 22:16

" 'ಈಗ ನೀನೇಕೆ ಸಾವಕಾಶಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳು ವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ.' "

© 2009 Truth for Today

# ಅನುಬಂಧ 3

# "ಕ್ರಿಸ್ತನಲ್ಲಿ" ಎಂಬ ಮಾತು

*"ಕ್ರಿಸ್ತನು ವಿಮೋಚಿತ ಮಾನವನ ನೂತನ ಸನ್ನಿವೇಶವಾಗಿದ್ದಾನೆ. ಮಾನವನು ತನ್ನ ಭೂಲೋಕದ ಬಂಧನಕಾರಿ ಪ್ರತಿಬಂಧಗಳಿಂದ ಹೊರಗೆ ಎಳಿಸಲ್ಪಟ್ಟಿದ್ದು ಸಂಪೂರ್ಣವಾಗಿ ಭಿನ್ನವಾಗಿರುವ ವಲಯಕ್ಕೆ, ಕ್ರಿಸ್ತನ ವಲಯಕ್ಕೆ ತರಲ್ಪಟ್ಟಿದ್ದಾನೆ. ಅವನು ನೂತನ ನೆಲೆಗೆ ಮತ್ತು ನೂತನ ವಾತಾವರಣಕ್ಕೆ ಬದಲಾಯಿಸಲ್ಪಟ್ಟಿದ್ದಾನೆ. ನೆಲೆ ಮತ್ತು ವಾತಾವರಣ ಎರಡೂ ಕ್ರಿಸ್ತನಾಗಿದ್ದಾನೆ. ಅವನ ಆತ್ಮವು ಶ್ರೇಷ್ಠವಾದ ಮೂಲಾಂಶವನ್ನು ಉಸಿರಾಡಿಸುತ್ತದೆ. ಅವನು ಉನ್ನತ ಮಟ್ಟದಲ್ಲಿ ಚಲಿಸುತ್ತಿದ್ದಾನೆ."*[1]

"ಕ್ರಿಸ್ತನಲ್ಲಿ" ಎಂಬ ಪದದ ಮತ್ತು ಹೊಸ ಒಡಂಬಡಿಕೆಯಲ್ಲಿ ಅದರ ಸಮಾಂತರತೆಗಳು ಜಾಗರೂಕ ಪೃಥಕ್ಕರಣವಿಲ್ಲದೇ ಸಭೆಯ ಸಮಗ್ರ ಅಧ್ಯಯನವು ಸಂಪೂರ್ಣವಾಗಲಾರದು. ಈ ಪದವು ಹೊಸ ಒಡಂಬಡಿಕೆಯ ವೆಸ್ಟ್‌ಲೇಸ್ ಗ್ರೀಕ ಪಠ್ಯದಲ್ಲಿ 119 ಸಲ ಕಂಡು ಬರುತ್ತದೆ (1 ಥೆಸಲೊನೀಕ 4:14 ಎಣಿಸಲ್ಪಡದಿದ್ದರೆ). ಪ್ರಾಥಮಿಕವಾಗಿ, ಇದು ಪೌಲನ ಬರಹಗಳಲ್ಲಿ ಕಾಣಿಸಿಕೊಳ್ಳುತ್ತದೆ ಆದರೆ 1 ಪೇತ್ರ (3:16; 5:10; 5:14), 1 ಯೋಹಾನ (2:27, 28; 3:24; 4:13; 5:11, 20) ಮತ್ತು ಪ್ರಕಟನೆ (14:13)ಯಲ್ಲಿಯೂ ಕಂಡುಬರುತ್ತದೆ.

ಪದಪ್ರಯೋಗವು ಹೊಸ ಒಡಂಬಡಿಕೆಯಲ್ಲಿ ಭಿನ್ನವಾದ ರೂಪಗಳಲ್ಲಿ, ವಿಶೇಷ ವಾಗಿ ಈ ರೀತಿಗಳಲ್ಲಿ ಉಪಯೋಗಿಸಲ್ಪಟ್ಟಿದೆ: "ಕ್ರಿಸ್ತನಲ್ಲಿ," "ಕ್ರಿಸ್ತಯೇಸುವಿನಲ್ಲಿ," "ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿ," "ಕರ್ತನಾದ ಯೇಸು ಕ್ರಿಸ್ತನಲ್ಲಿ," "ಕರ್ತನಾದ ಯೇಸುವಿನಲ್ಲಿ," "ಕರ್ತನಲ್ಲಿ," "ಯೇಸುವಿನಲ್ಲಿ," "ಆತ್ಮನಲ್ಲಿ," "ಆತನೊಳಗೆ," "ಯಾರಲ್ಲಿ," "ಆತನ ಕುಮಾರನಲ್ಲಿ," ಮತ್ತು "ಆತನ ಕುಮಾರನಾದ ಯೇಸು ಕ್ರಿಸ್ತನಲ್ಲಿ." "ಕ್ರಿಸ್ತನಲ್ಲಿ" ಇರುವುದು ಎಂಬ ತತ್ವವು ಸಹ "ಕ್ರಿಸ್ತನ ದೇಹ," "ಆತನ ದೇಹ," "ದೇಹ," ಮತ್ತು "ಒಂದೇ ದೇಹ" ಎಂಬದಕ್ಕೆ ಸಂಬಂಧಿಸಿ, ಹೊಸ ಒಡಂಬಡಿಕೆಯಲ್ಲಿ ಈ ಮಾತುಗಳು ಹದಿನಾರು ಸಲ ಪ್ರತಿಬಿಂಬಿಸಲ್ಪಟ್ಟಿವೆ. "ಕ್ರಿಸ್ತನಲ್ಲಿ" ಎಂಬ ಪದವು ನಿಜವಾಗಿಯೂ ಸುವಾರ್ತೆಗಳಲ್ಲಿ ಕಂಡು ಬರುವದಿಲ್ಲ; ಹೀಗಿದ್ದರೂ ಒಂದು ಸಲ ಯೋಹಾನ 15:5ರಲ್ಲಿ "ನನ್ನಲ್ಲಿ" ಎಂಬುದರಲ್ಲಿ ಛಾಯೆಯಾಗಿ ಕಂಡುಬರುತ್ತದೆ.

ಈ ಅಧ್ಯಯನದ ಉದ್ದೇಶವು ಕ್ರಿಸ್ತನ ಆತ್ಮಿಕ ದೇಹದಲ್ಲಿ ಇರುವದಕ್ಕೆ ಸಂಬಂಧಿಸಿರುವ ಕೇವಲ ಹೊಸ ಒಡಂಬಡಿಕೆಯ ವಚನಗಳನ್ನು ಒಳಗೊಂಡಿರುವ

ಒಂದು ಯಾದಿಯನ್ನು ಒದಗಿಸುವುದು ಆಗಿದೆ. "ಆತನಲ್ಲಿ" ಇಲ್ಲವೇ "ಆತನ ಮೇಲೆ" ನಂಬುವದನ್ನು ಕುರಿತು ಪದ ಬಂಧಗಳು ಸುವಾರ್ತೆಗಳಲ್ಲಿ ಅನೇಕ ಸಲ ಕಂಡುಬರುತ್ತವೆ. ಆದರೆ ಈ ಪದ ಬಂಧಗಳು ಈ ಯಾದಿಯಲ್ಲಿ ಕೂಡಿಸಲ್ಪಟ್ಟಿರುವುದಿಲ್ಲ. ಆ ಪದ ಬಂಧಗಳು ಒಂದು ಪ್ರತ್ಯೇಕವಾದ ಅಧ್ಯಯನದಲ್ಲಿ ಕೂಡಿಸಿಕೊಳ್ಳಬೇಕೆಂದು ನಂಬಲಾಗಿದೆ, ಯಾದಿಯು "ದೇವರಲ್ಲಿ" ಎಂಬ ಪದಗಳನ್ನು ಇಲ್ಲವೇ ಅಂಥ ರೀತಿಯ ಪದ ಬಂಧಗಳನ್ನು, ಅಪೊಸ್ತಲರ ಕೃತ್ಯಗಳು 17:28ರಲ್ಲಿ ಕಂಡು ಬರುವಂಥವುಗಳನ್ನು ಯಾದಿಯು ಒಳಗೊಂಡಿರುವದಿಲ್ಲ.

ನಿರೂಪಣೆಯಿಂದ, "ಕ್ರಿಸ್ತನಲ್ಲಿ" ಎಂಬ ಪದವು ತನ್ನ ಅನೇಕ ಭಿನ್ನವಾದ ರೂಪಗಳಲ್ಲಿ, ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿರುವ ಕ್ಷೇತ್ರದಲ್ಲಿ, "ಸಭೆ" ಎಂಬ (ಎಫೆಸ 1:21, 22) ಮತ್ತು "ಕ್ರಿಸ್ತನ ದೇಹ" (ಎಫೆಸ 4:12) ಎಂಬ ಮಾತುಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಅಲ್ಲಿ ಎಲ್ಲಾ ಆತ್ಮಿಕ ಆಶೀರ್ವಾದಗಳು ವಿಮೋಚಿತರಿಗೆ ಒದಗಿಸಲ್ಪಟ್ಟಿರುತ್ತವೆ.

ಈ ಪದದ ಭಿನ್ನವಾದ ರೂಪಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ. ಸುಲಭವಾಗಿ ಗುರುತಿಸಲು ದಪ್ಪ ಅಕ್ಷರಗಳಲ್ಲಿ ಮುದ್ರಿಸಲ್ಪಟ್ಟಿದೆ. ಅವುಗಳನ್ನು ನೀವು ಅಧ್ಯಯನ ಮಾಡುವಂತೆ, "ಕ್ರಿಸ್ತನಲ್ಲಿ" ಕ್ರೈಸ್ತನ ಸ್ಥಾನವನ್ನೂ ಪರಿಸ್ಥಿತಿಯನ್ನೂ ಮತ್ತು "ಆತನಲ್ಲಿ" ಅನುಭವಿಸಿದ ಅದ್ಭುತಕರವಾದ ಆತ್ಮಿಕ ಆಶೀರ್ವಾದಗಳನ್ನು ಗಮನಿಸಿರಿ.

ಈ ಯಾದಿಯನ್ನು ಇಂಗ್ಲೀಷಿನಲ್ಲಿ ರೂಪಿಸುವಾಗ ಪರಿಶುದ್ಧ ಬರಹಗಳ ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ಭಾಷಾಂತರವು ಉಪಯೋಗಿಸಲ್ಪಟ್ಟಿದೆ.

## "ನನ್ನಲ್ಲಿ" (1)

ಯೋಹಾನ 15:5

"ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು *ನನ್ನಲ್ಲಿಯೂ* ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ."

## "ಕ್ರಿಸ್ತನಲ್ಲಿ" (30)

ರೋಮಾಪುರ 9:2

"ಈ ಮಾತನ್ನು ಸುಳ್ಳಾಡದೆ *ಕ್ರಿಸ್ತನ* ಮುಂದೆ ಸತ್ಯವಾಗಿ ಹೇಳುತ್ತೇನೆ; ಪರಿಶುದ್ಧಾತ್ಮಾಧೀನವಾಗಿರುವ ನನ್ನ ಮನಸ್ಸೇ ಸಾಕ್ಷಿ."

ರೋಮಾಪುರ 12:5

"ಹಾಗೆಯೇ ನಾವೆಲ್ಲರು ಒಟ್ಟಾಗಿ *ಕ್ರಿಸ್ತನಲ್ಲಿ* ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ."

ರೋಮಾಪುರ 16:7

"ನನ್ನ ಸ್ವಜನರೂ ಜೊತೆಸೆರೆಯವರೂ ಆಗಿರುವ ಅಂದ್ರೋನಿಕನಿಗೂ ಯೂನ್ಯನಿಗೂ ವಂದನೆ; ಅವರು ಅಪೊಸ್ತಲರಲ್ಲಿ ಪ್ರಸಿದ್ಧರಾಗಿದ್ದಾರೆ, ಮತ್ತು ನನಗಿಂತ ಮುಂಚೆ *ಕ್ರಿಸ್ತನನ್ನು* ನಂಬುವವರಾದರು."

ರೋಮಾಪುರ 16:9
"*ಕ್ರಿಸ್ತನ* ಸೇವೆಯಲ್ಲಿ ನಮ್ಮ ಜೊತೆಕೆಲಸದವನಾದ ಉರ್ಬಾನನಿಗೂ ನನ್ನ ಪ್ರಿಯನಾದ ಸ್ತಾಖುನಿಗೂ ವಂದನೆಗಳು."

ರೋಮಾಪುರ 16:10
"*ಕ್ರಿಸ್ತನ* ಸೇವೆಯಲ್ಲಿ ಪರಿಶೋಧಿತನಾದ ಅಪೆಲ್ಲನಿಗೆ ವಂದನೆ. ಅರಿಸ್ತೊಬೂಲನ ಮನೆಯವರಿಗೆ ವಂದನೆಗಳು."

1 ಕೊರಿಂಥ 3:1
"ಸಹೋದರರರೇ, ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ *ಕ್ರಿಸ್ತನ* ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು."

1 ಕೊರಿಂಥ 4:10
"ನಾವಂತು ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ. ನೀವೋ *ಕ್ರಿಸ್ತನಲ್ಲಿ* ಬುದ್ಧಿವಂತರಾಗಿದ್ದೀರಿ; ನಾವು ಬಲಹೀನರು, ನೀವು ಬಲಿಷ್ಠರು; ನೀವು ಮಾನಶಾಲಿಗಳು, ನಾವು ಮಾನ ಹೀನರು."

1 ಕೊರಿಂಥ 4:15
"ನಿಮಗೆ ಕ್ರಿಸ್ತನಲ್ಲಿ ಉಪಾಧ್ಯಾಯರು ಸಾವಿರಾರು ಮಂದಿ ಇದ್ದರೂ ಬಹುಮಂದಿ ಇಲ್ಲ; ನಾನೇ ನಿಮ್ಮನ್ನು ಸುವಾರ್ತೆಯ *ಮೂಲಕ ಕ್ರಿಸ್ತಯೇಸುವಿನಲ್ಲಿ* ಪಡೆದೆನು."

1 ಕೊರಿಂಥ 4:17
"ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು *ಕ್ರಿಸ್ತನ* ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು."

1 ಕೊರಿಂಥ 15:17, 18
"ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ, ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ *ಕ್ರಿಸ್ತನವರಾಗಿ* ನಿದ್ರೆ ಹೋದವರು ನಾಶವಾದರು."

1 ಕೊರಿಂಥ 15:19
"ಈ ಜೀವಮಾನಕಾಲದ ಪೂರ್ತಿಗೆ ನಾವು *ಕ್ರಿಸ್ತನಲ್ಲಿ* ನಿರೀಕ್ಷೆಯಿಟ್ಟುಕೊಂಡದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ."

2 ಕೊರಿಂಥ 1:21
"ನಮ್ಮನ್ನು ಅಭಿಷೇಕಿಸಿ *ಕ್ರಿಸ್ತನ* ಅನ್ಯೋನ್ಯತೆಯಲ್ಲಿ[2] ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ."

2 ಕೊರಿಂಥ 2:17

"ಆದರೆ ನಾವು ದೇವರ ವಾಕ್ಯವನ್ನು ಕಲಬೆರಿಕೆಮಾಡುವವರಾದ ಹೆಚ್ಚು ಪಾಲಿನ ಜನರ ಹಾಗಿರದೆ ನಿಷ್ಕಪಟಿಗಳಾಗಿ ದೇವರಿಂದ ಉಪದೇಶ ಹೊಂದಿದವರಿಗೆ ತಕ್ಕ ಹಾಗೆ *ಕ್ರಿಸ್ತನ* ಅನ್ಯೋನ್ಯತೆಯಲ್ಲಿದ್ದುಕೊಂಡು ದೇವರ ಸಮಕ್ಷಮದಲ್ಲಿಯೇ ಮಾತಾಡುತ್ತೇವೆ."

2 ಕೊರಿಂಥ 3:14

"ಆದರೆ ಅವರ ಬುದ್ಧಿ ಮಂದವಾಯಿತು; ಈ ದಿನದವರೆಗೂ ಹಳೇ ಒಡಂಬಡಿಕೆಯು ಪಾರಾಯಣವಾಗುವಾಗ ಅದು *ಕ್ರಿಸ್ತನಲ್ಲಿ* ಗತಿಸಿಹೋಗುತ್ತದೆಂಬದು ಅವರಿಗೆ ಪ್ರಕಟ ವಾಗದೆ ಇರುವದರಿಂದ ಅದೇ ಮುಸುಕು ಎತ್ತಲ್ಪಡದೆ ಇರುತ್ತದೆ."

2 ಕೊರಿಂಥ 5:17

"ಹೀಗಿರಲಾಗಿ ಯಾವನಾದರೂ *ಕ್ರಿಸ್ತನಲ್ಲಿದ್ದರೆ* ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."

2 ಕೊರಿಂಥ 5:19

"... ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು *ಕ್ರಿಸ್ತನಲ್ಲಿ* ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬದೇ. ..."

2 ಕೊರಿಂಥ 12:2

"*ಕ್ರಿಸ್ತನಲ್ಲಿದ್ದ* ಒಬ್ಬ ಮನುಷ್ಯನನ್ನು ಬಲ್ಲೆನು, ಅವನು ಹದಿನಾಲ್ಕು ವರುಷಗಳ ಹಿಂದೆ ಮೂರನೆಯ ಆಕಾಶದ ಪರಿಯಂತರಕ್ಕೂ ಒಯ್ಯಲ್ಪಟ್ಟನು. ಅವನು ದೇಹಸಹಿತನಾಗಿ ಒಯ್ಯಲ್ಪಟ್ಟನೋ ದೇಹರಹಿತವಾಗಿ ಒಯ್ಯಲ್ಪಟ್ಟನೋ ನಾನರಿಯೆ, ದೇವರೇ ಬಲ್ಲನು."

2 ಕೊರಿಂಥ 12:19

"ನಾವು ಇಷ್ಟು ಹೊತ್ತು ನಿಮ್ಮ ಮುಂದೆ ಪ್ರತಿವಾದ ಮಾಡುವವರೆಂದು ನೆನಸುತ್ತಿರೋ? ನಿಮ್ಮ ಮುಂದೆಯಲ್ಲ, ದೇವರ ಸನ್ನಿಧಾನದಲ್ಲಿಯೇ ನಾವು *ಕ್ರಿಸ್ತನಲ್ಲಿದ್ದು* ಮಾತಾಡುವವರಾಗಿದ್ದೇವೆ. ಪ್ರಿಯರೇ, ನಾವು ಮಾತಾಡುವದೆಲ್ಲಾ ನಿಮ್ಮ ಭಕ್ತಿವೃದ್ಧಿ ಗೋಸ್ಕರವೇ ಆಗಿದೆ."

ಗಲಾತ್ಯ 1:22

"ಆದರೆ *ಕ್ರಿಸ್ತನಲ್ಲಿರುವ* ಯೂದಾಯದ ಸಭೆಗಳಿಗೆ ನನ್ನ ಗುರುತಿರಲಿಲ್ಲ."

ಗಲಾತ್ಯ 2:17

"ಆದರೆ ನಾವು *ಕ್ರಿಸ್ತನ ಆಶ್ರಯದಲ್ಲಿ* ನೀತಿವಂತರೆಂಬ ನಿರ್ಣಯ ಹೊಂದುವದಕ್ಕೆ ಪ್ರಯತ್ನಿಸುತ್ತಿರುವಾಗ ನಾವೂ ಪಾಪಿಗಳಾಗಿ ತೋರಿಬಂದರೆ ಕ್ರಿಸ್ತನು ಪಾಪಕ್ಕೆ ಸಹಾಯಕನೆಂದು ಹೇಳಬೇಕೇನು? ಎಂದಿಗೂ ಹೇಳಬಾರದು!"

ಎಫೆಸ 1:3

"ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ.

ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು *ಕ್ರಿಸ್ತ ಯೇಸುವಿನಲ್ಲಿ* ಅನುಗ್ರಹಿಸಿದ್ದಾನೆ."

ಎಫೆಸ 4:32
"ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ. ದೇವರು ನಿಮಗೆ *ಕ್ರಿಸ್ತನಲ್ಲಿ* ಕ್ಷಮಿಸಿದನಲ್ಲಾ."

ಫಿಲಿಪ್ಪಿ 2:1, 2
"*ಕ್ರಿಸ್ತನಲ್ಲಿ* ಉತ್ತೇಜನ ... ಉಂಟಾಗುವವಾದರೆ ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ."

ಕೊಲೊಸ್ಸೆ 1:2
"ದೇವ ಜನರಿಗೆ ಅಂದರೆ *ಕ್ರಿಸ್ತನಲ್ಲಿರುವ* ನಂಬಿಗಸ್ತರಾದ ಸಹೋದರರಿಗೆ ಬರೆಯುವದೇನಂದರೆ - ನಮ್ಮ ತಂದೆಯಾದ ದೇವರಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ."

ಕೊಲೊಸ್ಸೆ 1:28
"ನಾವು ಆತನನ್ನು ಪ್ರಸಿದ್ಧಿ ಪಡಿಸುವವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನು *ಕ್ರಿಸ್ತನಲ್ಲಿ* ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ."

1 ಥೆಸಲೊನೀಕ 4:16
"ಕರ್ತನು ತಾನೇ ಆಜ್ಞಾ ಘೋಷದೊಡನೆಯು ಪ್ರಧಾನದೂತನ ಶಬ್ಬದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು; ಆಗ *ಕ್ರಿಸ್ತನಲ್ಲಿರುವ* ಸತ್ತವರು ಮೊದಲು ಎದ್ದು ಬರುವರು."

ಫಿಲೆಮೋನ 1:20
"ಹೌದು, ಸಹೋದರನೇ, *ಕರ್ತನಲ್ಲಿ* ನಿನ್ನಿಂದ ನನಗೆ ಪ್ರಯೋಜನವಾಗುವ ಹಾಗೆ ಮಾಡು."

1 ಪೇತ್ರ 3:16
"ಒಳ್ಳೇ ಮನಸ್ಸಾಕ್ಷಿಯುಳ್ಳವರಾಗಿರಿ; *ಆಗ ಕ್ರಿಸ್ತನಲ್ಲಿರುವ* ನಿಮ್ಮ ಒಳ್ಳೇ ನಡವಳಿಕೆಯನ್ನು ಕುರಿತು ಬೈಯುವವರು ನಿಮ್ಮನ್ನು ನಿಂದಿಸುವದಕ್ಕೆ ನಾಚಿಕೆಪಡುವರು."

1 ಪೇತ್ರ 5:10
"*ಕ್ರಿಸ್ತನಲ್ಲಿ* ನಿಮ್ಮನ್ನು ತನ್ನ ನಿತ್ಯಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು."

1 ಪೇತ್ರ 5:14ಬಿ
"ಪ್ರೀತಿಯಿಂದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ. *ಕ್ರಿಸ್ತನಲ್ಲಿರುವ* ನಿಮ್ಮೆಲ್ಲರಿಗೆ ಶಾಂತಿಯಿರಲಿ."

## "ಕ್ರಿಸ್ತನಲ್ಲಿ" (5)[3]

1 ಕೊರಿಂಥ 15:22
"ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ *ಕ್ರಿಸ್ತನ ಸಂಬಂಧದಿಂದ* ಎಲ್ಲರೂ ಜೀವಿತರಾಗುವರು."

2 ಕೊರಿಂಥ 2:14
"*ಕ್ರಿಸ್ತನ ಅನ್ಯೋನ್ಯತೆಯಲ್ಲಿ* ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರವು."

ಎಫೆಸ 1:9, 10
"ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು *ಕ್ರಿಸ್ತನಲ್ಲಿ* ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ..."

ಎಫೆಸ 1:11, 12
"*ಕ್ರಿಸ್ತನಲ್ಲಿಯೇ* ಸಮಸ್ತವು ಒಂದಾಗುವದು. ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರು ನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿ ಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡಿಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು."

ಎಫೆಸ 1:20, 21
"ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬದು *ಕ್ರಿಸ್ತನಲ್ಲಿ* ತೋರಿಬಂದಿದೆ. ಹೇಗಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ... ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು."

## "ಕ್ರಿಸ್ತ ಯೇಸುವಿನಲ್ಲಿ" (42)

ರೋಮಾಪುರ 3:23, 24
"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ *ಕ್ರಿಸ್ತ ಯೇಸುವಿನಿಂದಾದ* ಪಾಪ ವಿಮೋಚನೆಯ ಮೂಲಕವಾಗಿ ಆಗುವದು."

ರೋಮಾಪುರ 6:11
"ಅದೇ ಪ್ರಕಾರ ನೀವು ಸಹ ನಿಮ್ಮನ್ನು *ಕ್ರಿಸ್ತ ಯೇಸುವಿನ* ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ."

ರೋಮಾಪುರ 6:23
"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ *ಕ್ರಿಸ್ತ ಯೇಸುವಿನಲ್ಲಿರುವ* ನಿತ್ಯಜೀವ."

ರೋಮಾಪುರ 8:1
"ಆದದರಿಂದ *ಕ್ರಿಸ್ತ ಯೇಸುವಿನಲ್ಲಿ*ರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ."

ರೋಮಾಪುರ 8:2
"ಯಾಕಂದರೆ ಜೀವವನ್ನುಂಟು ಮಾಡುವ ಪರಿಶುದ್ಧಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ *ಕ್ರಿಸ್ತಯೇಸುವಿನ ಮೂಲಕ* ಬಿಡಿಸಿತು."

ರೋಮಾಪುರ 15:17
"ದೇವರ ಸೇವೆಯಲ್ಲಿ ಹೊಗಳಿಕೊಳ್ಳುವದಕ್ಕೆ *ಕ್ರಿಸ್ತಯೇಸುವಿನಲ್ಲಿ* ನನಗೆ ಕಾರಣವುಂಟು."

ರೋಮಾಪುರ 16:3
"*ಕ್ರಿಸ್ತ ಯೇಸುವಿನ* ಸೇವೆಯಲ್ಲಿ ನನ್ನ ಜೊತೆಕೆಲಸದವರಾದ ಪ್ರಿಸ್ಕಳಿಗೂ ಅಕ್ವಿಲನಿಗೂ ನನ್ನ ವಂದನೆಗಳನ್ನು ಹೇಳಿರಿ."

1 ಕೊರಿಂಥ 1:2
"ಕೊರಿಂಥದಲ್ಲಿರುವ ದೇವರ ಸಭೆಗೆ ಅಂದರೆ *ಕ್ರಿಸ್ತೇಸುವಿನಲ್ಲಿ* ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತ ದೇವಜನರಿಗೂ ಕರ್ತನಾಗಿರುವ ಯೇಸು ಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರು ಎಲ್ಲಿದ್ದರೂ ಅವರೆಲ್ಲರಿಗೆ ಬರೆಯುವುದು."

1 ಕೊರಿಂಥ 1:4
"*ಕ್ರಿಸ್ತ ಯೇಸುವಿನಲ್ಲಿ* ದೇವರು ನಿಮಗೆ ಅನುಗ್ರಹಿಸಿದ ಕೃಪೆಯ ನಿಮಿತ್ತ ನಾನು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರನ್ನು ಕೊಂಡಾಡುತ್ತೇನೆ."

1 ಕೊರಿಂಥ 1:30
"ನೀವು *ಕ್ರಿಸ್ತ ಯೇಸುವಿನಲ್ಲಿರುವದು* ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು."

1 ಕೊರಿಂಥ 4:15

"ನಿಮಗೆ ಕ್ರಿಸ್ತನಲ್ಲಿ ಉಪಾಧ್ಯಾಯರು ಸಾವಿರಾರು ಮಂದಿ ಇದ್ದರೂ ತಂದೆಗಳು ಬಹುಮಂದಿ ಇಲ್ಲ; ನಾನೇ ನಿಮ್ಮನ್ನು ಸುವಾರ್ತೆಯ ಮೂಲಕ *ಕ್ರಿಸ್ತ ಯೇಸುವಿನಲ್ಲಿ* ಪಡೆದೆನು."

1 ಕೊರಿಂಥ 16:24

"*ಕ್ರಿಸ್ತ ಯೇಸುವಿನಲ್ಲಿ* ನಿಮ್ಮೆಲ್ಲರ ಮೇಲೆ ನನ್ನ ಪ್ರೀತಿ."

ಗಲಾತ್ಯ 2:4

"ಸಭೆಗೆ ಕಳ್ಳತನದಿಂದ ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ ಇದ್ದದರಿಂದ ಬಲತ್ಕಾರನಡೆದೀತೆಂಬ ಭಯವಿತ್ತು. ಅವರು ನಮ್ಮನ್ನೂ ದಾಸತ್ವದೊಳಗೆ ಸಿಕ್ಕಿಸ ಬೇಕೆಂದು *ಕ್ರಿಸ್ತಯೇಸುವಿನಲ್ಲಿ* ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರಸಿಕೊಂಡು ಬಂದವರು."

ಗಲಾತ್ಯ 3:13, 14

"ಅಬ್ರಹಾಮನಿಗೆ ಉಂಟಾದ ಆಶೀರ್ವಾದವು *ಕ್ರಿಸ್ತ ಯೇಸುವಿನಲ್ಲಿ* ಅನ್ಯ ಜನರಿಗೆ ಉಂಟಾಗುವಂತೆಯೂ ... ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿ ರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು."

ಗಲಾತ್ಯ 3:28

"ನೀವೆಲ್ಲರು *ಕ್ರಿಸ್ತ ಯೇಸುವಿನಲ್ಲಿ* ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ."

ಗಲಾತ್ಯ 5:6

"*ಕ್ರಿಸ್ತ ಯೇಸುವಿನಲ್ಲಿರುವವರಿಗೆ* ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ. ಪ್ರೀತಿಯಿಂದ ಕೆಲಸನಡಿಸುವ ನಂಬಿಕೆಯಿಂದಲೇ ಪ್ರಯೋಜನ ವಾಗಿದೆ."

ಎಫೆಸ 1:1

"ದೇವರ ಚಿತ್ತಾನುಸಾರವಾಗಿ *ಕ್ರಿಸ್ತ ಯೇಸುವಿನ* ಅಪೊಸ್ತಲನಾದ ಪೌಲನು ಎಫೆಸದಲ್ಲಿರುವ ದೇವಜನರಿಗೂ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟಿರುವವರಿಗೂ ಬರೆಯುವುದು."

ಎಫೆಸ 2:4-7

"ಆದರೆ ... ದೇವರು ... ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ... ಬದುಕಿಸಿದ್ದಲ್ಲದೆ ತಾನು *ಕ್ರಿಸ್ತ ಯೇಸುವಿನಲ್ಲಿ* ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು *ಕ್ರಿಸ್ತ ಯೇಸುವಿನಲ್ಲಿರುವ* ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ."

ಎಫೆಸ 2:10

"ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ *ಕ್ರಿಸ್ತ ಯೇಸುವಿನಲ್ಲಿ* ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕ ಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು."

ಎಫೆಸ 2:13

"ಈಗಲಾದರೋ ಮೊದಲು ದೂರವಾಗಿದ್ದ ನೀವು *ಕ್ರಿಸ್ತಯೇಸುವನ್ನು* ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ."

ಎಫೆಸ 3:6

"... ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ *ಯೇಸುವಿನಲ್ಲಿ*ರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ... ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ."

ಎಫೆಸ 3:11

"ದೇವರು ನಮ್ಮ ಕರ್ತನಾದ *ಕ್ರಿಸ್ತ ಯೇಸುವಿನಲ್ಲಿ*[4] ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ... ಉದ್ದೇಶಿಸಿದ್ದನು."

ಎಫೆಸ 3:21

"ದೇವರಿಗೆ ಸಭೆಯಲ್ಲಿಯೂ *ಕ್ರಿಸ್ತ ಯೇಸುವಿನಲ್ಲಿಯೂ* ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್."

ಫಿಲಿಪ್ಪಿ 1:1

"ಕ್ರಿಸ್ತ ಯೇಸುವಿನ ದಾಸರಾದ ಪೌಲ ತಿಮೊಥೆಯರು ಫಿಲಿಪ್ಪಿಯಲ್ಲಿ *ಕ್ರಿಸ್ತ ಯೇಸುವಿನ ಮೂಲಕ* ದೇವಜನರಾಗಿರುವವರೆಲ್ಲರಿಗೂ ಅವರಲ್ಲಿರುವ ಸಭಾಧ್ಯಕ್ಷರಿಗೂ ಸಭಾಸೇವಕರಿಗೂ ಬರೆಯುವುದು."

ಫಿಲಿಪ್ಪಿ 1:26

"ಹೀಗೆ ನಾನು ತಿರಿಗಿ ನಿಮ್ಮಲ್ಲಿಗೆ ಬರುವದರಿಂದ ನೀವು *ಕ್ರಿಸ್ತ ಯೇಸುವಿನ ವಿಷಯವಾಗಿ* ಉತ್ಸಾಹಪಡುವದಕ್ಕೆ ನನ್ನಿಂದ ಅಧಿಕವಾದ ಆಸ್ಪದವಿರುವುದು."

ಫಿಲಿಪ್ಪಿ 3:3

"ನಿಜವಾದ ಸುನ್ನತಿಯವರು ಯಾರಂದರೆ - ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ *ಕ್ರಿಸ್ತ ಯೇಸುವಿನಲ್ಲಿ* ಹರ್ಷಗೊಳ್ಳುವವರೂ ಶರೀರಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ."

ಫಿಲಿಪ್ಪಿ 3:14

"ದೇವರು *ಕ್ರಿಸ್ತ ಯೇಸುವಿನಲ್ಲಿ* ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ."

ಫಿಲಿಪ್ಪಿ 4:7
"ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ *ಕ್ರಿಸ್ತ ಯೇಸುವಿನಲ್ಲಿ* ಕಾಯುವದು."

ಫಿಲಿಪ್ಪಿ 4:19
"ನನ್ನ ದೇವರು *ಕ್ರಿಸ್ತ ಯೇಸುವಿನ ಮೂಲಕ* ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು."

ಫಿಲಿಪ್ಪಿ 4:21
"*ಕ್ರಿಸ್ತ ಯೇಸುವಿನಲ್ಲಿರುವ* ದೇವಜನರಲ್ಲಿ ಪ್ರತಿಯೊಬ್ಬರನ್ನು ವಂದಿಸಿರಿ. ನನ್ನ ಜೊತೆಯಲ್ಲಿರುವ ಸಹೋದರರು ನಿಮ್ಮನ್ನು ವಂದಿಸುತ್ತಾರೆ."

1 ಥೆಸಲೊನೀಕ 2:14
"ನೀವು ಯೂದಾಯದಲ್ಲಿ *ಕ್ರಿಸ್ತ ಯೇಸುವಿನಲ್ಲಿರುವ* ದೇವರ ಸಭೆಗಳನ್ನು ಅನುಸರಿಸುವವರಾದಿರಿ. ಅವರು ಯೆಹೂದ್ಯರಿಂದ ಅನುಭವಿಸಿದಂಥ ಕಷ್ಟಗಳನ್ನು ನೀವೂ ನಿಮ್ಮ ಸ್ವದೇಶದವರಿಂದ ಅನುಭವಿಸಿದಿರಿ."

1 ಥೆಸಲೊನೀಕ 5:18
"ಎಲ್ಲಾದರಲ್ಲಿಯೂ ಕೃತಾಜ್ಞತಾಸ್ತುತಿ ಮಾಡಿರಿ; ಇದೇ ನಿಮ್ಮ ವಿಷಯವಾಗಿ *ಕ್ರಿಸ್ತ ಯೇಸುವಿನಲ್ಲಿ* ತೋರಿಬಂದ ದೇವರ ಚಿತ್ತ."

1 ತಿಮೊಥೆ 1:14
"ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು *ಕ್ರಿಸ್ತ ಯೇಸುವಿನಲ್ಲಿರುವ* ನಂಬಿಕೆಯನ್ನೂ ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು."

2 ತಿಮೊಥೆ 1:1, 2
"*ಕ್ರಿಸ್ತ ಯೇಸುವಿನಲ್ಲಿರುವ* ಜೀವವಾಗ್ದಾನವನ್ನು ತಿಳಿಯಪಡಿಸುವದಕ್ಕೋಸ್ಕರ ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನು ತನ್ನ ಪ್ರಿಯ ಕುಮಾರನಾದ ತಿಮೊಥೆಯನಿಗೆ … ."

2 ತಿಮೊಥೆ 1:9
"… [ದೇವರು] ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆತನು ಅನಾದಿಕಾಲದಲ್ಲಿ ಆ ಕೃಪೆಯನ್ನು *ಕ್ರಿಸ್ತ ಯೇಸುವಿನಲ್ಲಿ* ನಮಗೆ ಅನುಗ್ರಹಿಸಿದನು."

2 ತಿಮೊಥೆ 1:13
"ನೀನು *ಕ್ರಿಸ್ತ ಯೇಸುವಿನಲ್ಲಿ* ನಂಬಿಕೆಯೂ ಪ್ರೀತಿಯೂ ಉಳ್ಳವನಾಗಿ ನನ್ನಿಂದ ಕೇಳಿದ ಸ್ವಸ್ಥಬೋಧನಾವಾಕ್ಯಗಳನ್ನು ಮಾದರಿಮಾಡಿಕೊಂಡು ಅನುಸರಿಸು."

2 ತಿಮೊಥೆ 2:1
"ನನ್ನ ಮಗನೇ, ನೀನು *ಕ್ರಿಸ್ತ ಯೇಸುವಿನಲ್ಲಿರುವ* ಕೃಪೆಯಿಂದ ಬಲಹೊಂದಿದವನಾಗು."

2 ತಿಮೊಥೆ 2:10
"ಆದಕಾರಣ ದೇವರಾರಿಸಿಕೊಂಡವರು ನನ್ನ ಕೂಡ *ಕ್ರಿಸ್ತಯೇಸುವಿನಲ್ಲಿರುವ* ರಕ್ಷಣೆಯನ್ನು ನಿತ್ಯಪ್ರಭಾವ ಸಹಿತವಾಗಿ ಹೊಂದಬೇಕೆಂದು ನಾನು ಅವರಿಗೋಸ್ಕರ ಎಲ್ಲವನ್ನೂ ತಾಳಿಕೊಳ್ಳುತ್ತೇನೆ."

2 ತಿಮೊಥೆ 3:12
"*ಕ್ರಿಸ್ತ ಯೇಸುವಿನಲ್ಲಿ* ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು."

2 ತಿಮೊಥೆ 3:15
"ಆ ಗ್ರಂಥಗಳು *ಕ್ರಿಸ್ತ ಯೇಸುವಿನಲ್ಲಿರುವ* ನಂಬಿಕೆಯ ಮೂಲಕ ರಕ್ಷಣೆ ಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿವೆ."

ಫಿಲೆಮೋನ 23
"*ಕ್ರಿಸ್ತ ಯೇಸುವಿನ* ನಿಮಿತ್ತವಾಗಿ ನನ್ನ ಜೊತೆ ಸೆರೆಯವನಾದ ಎಪಫ್ರನೂ ... ನಿನ್ನನ್ನು ವಂದಿಸುತ್ತಾರೆ."

## "ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ" (1)

ರೋಮಾಪುರ 8:39
"... ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು *ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ* ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು."

## "ಕರ್ತನಾದ ಯೇಸು ಕ್ರಿಸ್ತನಲ್ಲಿ" (3)

1 ಥೆಸಲೊನೀಕ 1:1
"ತಂದೆಯಾದ ದೇವರಲ್ಲಿಯೂ *ಕರ್ತನಾದ ಯೇಸು ಕ್ರಿಸ್ತನಲ್ಲಿಯೂ* ಇರುವ ಥೆಸಲೊನೀಕದವರ ಸಭೆಗೆ ಪೌಲ, ಸಿಲ್ವಾನ, ತಿಮೊಥೆಯ ಎಂಬ ನಾವು ಬರೆಯುವ ದೇನಂದರೆ - ನಿಮಗೆ ಕೃಪೆಯೂ ಶಾಂತಿಯೂ ಆಗಲಿ."

2 ಥೆಸಲೊನೀಕ 1:1
"ನಮ್ಮ ತಂದೆಯಾದ ದೇವರಲ್ಲಿಯೂ *ಕರ್ತನಾದ ಯೇಸು ಕ್ರಿಸ್ತನಲ್ಲಿಯೂ* ಇರುವ ಥೆಸಲೊನೀಕದವರ ಸಭೆಗೆ ಪೌಲ, ಸಿಲ್ವಾನ ತಿಮೊಥೆಯ ಎಂಬ ನಾವು ಬರೆಯುವುದು."

2 ಥೆಸಲೊನೀಕ 3:12
"ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡ

ಬೇಕೆಂದು *ಕರ್ತನಾದ ಯೇಸು ಕ್ರಿಸ್ತನಲ್ಲಿ* ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ.''

## **"ಕರ್ತನಾದ ಯೇಸುವಿನಲ್ಲಿ" (1)**

ರೋಮಾಪುರ 14:14
"ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲವೆಂದು ಬಲ್ಲೆನು, ಮತ್ತು *ಕರ್ತನಾದ ಯೇಸುವಿನಲ್ಲಿದ್ದು*ಕೊಂಡು ದೃಢವಾಗಿ ನಂಬಿದ್ದೇನೆ.''

## **"ಕರ್ತನಲ್ಲಿ" (3)**

1 ಕೊರಿಂಥ 4:17
"ಈ ನಿಮಿತ್ತದಿಂದ *ಕರ್ತನಲ್ಲಿ* ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು.''

2 ಕೊರಿಂಥ 2:12
"ಕ್ರಿಸ್ತನ ಸುವಾರ್ತೆಯನ್ನು ಸಾರುವದಕ್ಕಾಗಿ ನಾನು ತ್ರೋವಕ್ಕೆ ಬರಲು *ಕರ್ತನಲ್ಲಿ* ನನಗೆ ಒಳ್ಳೇ ಸಂದರ್ಭ ದೊರೆಯಿತು.''

ಪ್ರಕಟನೆ 14:13
"ಪರಲೋಕದಿಂದ ಒಂದು ಶಬ್ದವು ನನಗೆ ಕೇಳಿಸಿತು. ಅದು ಇಂದಿನಿಂದ *ಕರ್ತನ ಭಕ್ತರಾಗಿ* ಸಾಯುವವರು ಧನ್ಯರು ಎಂಬದಾಗಿ ಬರೆ ಎಂದು ನನಗೆ ಹೇಳಿತು. ಅದಕ್ಕೆ ಆತ್ಮನು - ಹೌದು, ಅವರು ಧನ್ಯರೇ; ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವದು; ಅವರ ಸುಕೃತ್ಯಗಳು ಅವರೊಡನೆ ಬರುವವು ಎಂದು ಹೇಳುತ್ತಾನೆ.''

## **"ಯೇಸುವಿನಲ್ಲಿ" (2)**

ಎಫೆಸ 4:20, 21
"ಆದರೆ ಈ ರೀತಿಯಲ್ಲಿ ನೀವು ಕ್ರಿಸ್ತನ ಬಗ್ಗೆ ಕಲಿತುಕೊಂಡಿರದಿದ್ದರೆ, *ಯೇಸುವಿನಲ್ಲಿ* ಸತ್ಯವು ಇದ್ದರೀತಿಯಲ್ಲಿಯೇ ನೀವು ಆತನ ಬಗ್ಗೆ ಕೇಳುವಿರಿ ಹಾಗೂ ಆತನಲ್ಲಿ ಬೋಧಿಸಲ್ಪಟ್ಟಿರುವಿರಿ.''

1 ಥೆಸಲೊನೀಕ 4:14
"ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ *ಯೇಸುವಿನಲ್ಲಿದ್ದು*ಕೊಂಡು ನಿದ್ರೆಹೋಗುವವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು ನಂಬಬೇಕಲ್ಲವೇ.''[5]

## “ಆತನಲ್ಲಿ” (20)

2 ಕೊರಿಂಥ 1:19
“ನಾವು ಅಂದರೆ ನಾನೂ ಸಿಲ್ವಾನನೂ ತಿಮೊಥೆಯನೂ ನಿಮ್ಮಲ್ಲಿ ಪ್ರಸಿದ್ಧಿಪಡಿಸಿದ ದೇವರ ಮಗನಾದ ಯೇಸು ಕ್ರಿಸ್ತನು ಹೌದೆಂತಲೂ ಅಲ್ಲವೆಂತಲೂ ಎರಡು ಪ್ರಕಾರವಾಗಿರಲಿಲ್ಲ. *ಆತನಲ್ಲಿ* ಹೌದೆಂಬದೇ ನೆಲೆಗೊಂಡಿದೆ.”

2 ಕೊರಿಂಥ 1:20
“ಆದಕಾರಣ ದೇವರ ಪ್ರಭಾವವು ಪ್ರಕಾಶವಾಗುವದಕ್ಕೋಸ್ಕರ *ಆತನ ಮೂಲಕವಾಗಿ* ನಾವು ಆಮೆನ್ ಎಂದು ಹೇಳತ್ತೇವೆ.”

2 ಕೊರಿಂಥ 5:21
“ನಾವು *ಆತನಲ್ಲಿ* ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು.”

2 ಕೊರಿಂಥ 13:4
“ಆತನು ಬಲಹೀನಾವಸ್ಥೆಯಲ್ಲಿದ್ದದರಿಂದ ಶಿಲುಬೆಗೆ ಹಾಕಲ್ಪಟ್ಟನು ನಿಜ; ಆದರೂ ದೇವರ ಬಲದಿಂದ ಬದುಕುತ್ತಾನೆ. ನಾವು ಸಹ ಆತನ ಬಲಹೀನಾ ವಸ್ಥೆಯಲ್ಲಿ ಪಾಲುಗಾರರಾಗಿದ್ದೇವೆ; ಆದರೂ ಆತನೊಂದಿಗೆ ದೇವರ ಬಲದಿಂದ ಬದುಕುವವರಾಗಿದ್ದೇವೆ; ಇದು ನಿಮಗೆ ತೋರಿಬರುವದು.”

ಎಫೆಸ 1:4
“... ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಆತನಲ್ಲಿ ಆರಿಸಿಕೊಂಡನು.”

ಎಫೆಸ 1:9
“ಆತನು ... ತಾನು ... ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು *ಆತನಲ್ಲಿ* ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು.”

ಎಫೆಸ 4:20, 21
“ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ. ಆತನನ್ನೇ ಕೇಳಿದಿರಲ್ಲಾ, *ಆತನಲ್ಲಿಯೇ* ಉಪದೇಶವನ್ನು ಹೊಂದಿದಿರಲ್ಲಾ.”

ಫಿಲಿಪ್ಪಿ 3:8, 9
“ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ ... *ಆತನಲ್ಲಿ*ರುವವನಾಗಿ ಕಾಣಿಸಿಕೊಳ್ಳ ಬೇಕೆಂಬದೇ.”

ಕೊಲೊಸ್ಸೆ 1:17
"ಆತನು ಎಲ್ಲಕ್ಕೂ ಮೊದಲು ಇದ್ದವನು; *ಆತನಲ್ಲಿ* ಎಲ್ಲಾ ಸಂಗತಿಗಳು ಒಂದಾಗಿ ಕೂಡಿಕೊಂಡಿರುವವು."

ಕೊಲೊಸ್ಸೆ 1:19
"ತಂದೆಯಾದ ದೇವರು *ಆತನಲ್ಲಿ* ತನ್ನ ಸರ್ವಸಂಪೂರ್ಣತೆಯು ವಾಸವಾಗಿರ ಬೇಕೆಂದು ... ನಿಷ್ಕರ್ಷೆ ಮಾಡಿದನು."

ಕೊಲೊಸ್ಸೆ 2:6, 7
"ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. *ಆತನಲ್ಲಿ ಬೇರೂರಿಕೊಂಡು ಭಕ್ತಿ*ವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತನಂಬಿಕೆಯಲ್ಲಿ ನೆಲೆಗೊಂಡು ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರ ಮಾಡುವವರಾಗಿರಿ."

ಕೊಲೊಸ್ಸೆ 2:9
"*ಆತನಲ್ಲಿಯೇ* ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ."

ಕೊಲೊಸ್ಸೆ 2:10
"ನೀವು *ಆತನಲ್ಲಿ*ದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವವರಾಗಿದ್ದೀರಿ."

2 ಥೆಸಲೊನೀಕ 1:11, 12
"ಆ ದಿನವನ್ನು ನಾವು ಎದುರುನೋಡುತ್ತಾ ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆಮಾಡಿ - ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯ ರೆಂದು ಎಣಿಸಬೇಕೆಂತಲೂ ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋ ಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿ ಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಬೇಡಿಕೊಳ್ಳುತ್ತೇವೆ. ಹೀಗಾದರೆ ನಮ್ಮ ದೇವರ ಮತ್ತು ಕರ್ತನಾದ ಯೇಸುಕ್ರಿಸ್ತನ ಕೃಪೆಯಿಂದ ನಿಮ್ಮ ಮೂಲಕ ನಮ್ಮ ಕರ್ತನಾದ ಯೇಸುವಿನ ಹೆಸರಿಗೆ ಮಹಿಮೆ ಉಂಟಾಗುವದು; *ಆತನಲ್ಲಿ* ನಿಮಗೂ ಮಹಿಮೆ ಉಂಟಾಗುವದು."

1 ಯೋಹಾನ 2:27
"ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ. ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದ್ದಾಗಿದ್ದು ಸತ್ಯವಾ ಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶ ಮಾಡಿದ ಪ್ರಕಾರ *ಆತನಲ್ಲಿ* ನೆಲೆಗೊಂಡಿರ್ರಿ."

1 ಯೋಹಾನ 2:28
"ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆ ಪಡದೆ ಧೈರ್ಯದಿಂದಿರುವಂತೆ *ಆತನಲ್ಲಿ* ನೆಲೆಗೊಂಡಿರೋಣ."

1 ಯೋಹಾನ 3:24

"ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು *ಆತನಲ್ಲಿ* ನೆಲೆಗೊಂಡಿರುತ್ತಾನೆ. ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು."

1 ಯೋಹಾನ 4:13

"ದೇವರು ನಮಗೆ ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸಿದ್ದರಿಂದಲೇ ನಾವು *ಆತನಲ್ಲಿ* ನೆಲೆಗೊಂಡಿದ್ದೇವೆಂತಲೂ ಆತನು ನಮ್ಮಲ್ಲಿ ನೆಲೆಗೊಂಡಿದ್ದಾನೆಂತಲೂ ತಿಳಿದು ಕೊಳ್ಳುತ್ತೇವೆ."

1 ಯೋಹಾನ 5:20

"ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವ *ಆತನಲ್ಲಿ*ದ್ದೇವೆ. ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ."

## "ಆತನೊಳಗೆ" (1)

ಎಫೆಸ 4:15

"ಪ್ರೀತಿಯಿಂದ ಸತ್ಯವನ್ನು ಅನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ *ಆತನೊಳಗೆ* ಐಕ್ಯವನ್ನು ಹೊಂದುತ್ತಾ ಬರಬೇಕು, ಆತನೇ ಶಿರಸ್ಸು, ಆತನು ಕ್ರಿಸ್ತನೇ."

## "ಯಾವಾತನಲ್ಲಿ" "(In Whom)" (10)

ಎಫೆಸ 1:7

"ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ *ಆತನಲ್ಲಿ* ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ."

ಎಫೆಸ 1:11

"ಇದಲ್ಲದೆ *ಆತನಲ್ಲಿ*[7] ನಾವು ದೇವರ ಸ್ವಕೀಯ ಪ್ರಜೆಯಾದೆವು. ಬರಬೇಕಾದ ಕ್ರಿಸ್ತನನ್ನು ಎದುರು ನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಿ ಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡಿಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು."

ಎಫೆಸ 1:13

"ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ *ಆತನಲ್ಲಿ*[8] ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪರಿಶುದ್ಧಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ."

ಎಫೆಸ 2:21
“*ಆತನಲ್ಲಿ* ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ.”

ಎಫೆಸ 2:22
“*ಆತನಲ್ಲಿ* ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ.”

ಎಫೆಸ 3:12
“ದೇವರ ಸಾನ್ನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ *ಆತನಲ್ಲಿಯೇ* ನಮಗೆ ಉಂಟಾಯಿತು.”

ಕೊಲೊಸ್ಸೆ 1:14
“*ಆತನಲ್ಲಿ* ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.”

ಕೊಲೊಸ್ಸೆ 2:3
“*ಆತನಲ್ಲಿ* ಜ್ಞಾನವಿದ್ಯಾಸಂಬಂಧವಾದ ನಿಕ್ಷೇಪಗಳನ್ನೆಲ್ಲಾ ಅಡಗಿಸಿಕೊಂಡಿರುವ ... .”

ಕೊಲೊಸ್ಸೆ 2:11
“ನೀವು *ಆತನಲ್ಲಿ* ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ.”

## “ಆತನ ಮಗನಲ್ಲಿ” (1)

1 ಯೋಹಾನ 5:11
“ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು, ಆ ಜೀವವು *ಆತನ ಮಗನಲ್ಲಿ* ಅದೆ ಎಂಬದೇ.”

## “ಆತನ ಮಗನಾದ ಯೇಸುಕ್ರಿಸ್ತನಲ್ಲಿ” (1)

1 ಯೋಹಾನ 5:20
“ದೇವರು ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು *ದೇವರ ಮಗನಾದ ಯೇಸು ಕ್ರಿಸ್ತನಲ್ಲಿ* ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ.”

## “ಕ್ರಿಸ್ತನ ದೇಹ” (3)

ರೋಮಾಪುರ 7:4

“ಹಾಗೆಯೇ ನನ್ನ ಸಹೋದರರೇ, ನೀವು ಸಹ *ಕ್ರಿಸ್ತನ ದೇಹದ* ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತೀರಿ. ದೇವರಿಗೆ ಫಲವಾಗುವದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿಕೊಂಡಿರಿ.”

1 ಕೊರಿಂಥ 10:16

“ನಾವು ದೇವಸ್ತೋತ್ರ ಮಾಡಿ ಪಾತ್ರೆಯಲ್ಲಿ ಪಾನ ಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು *ಕ್ರಿಸ್ತನ ದೇಹದಲ್ಲಿ* ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ.”

ಎಫೆಸ 4:11, 12

“ಆತನು ಕೆಲವರನ್ನು ಅಪೊಸ್ತಲರನ್ನಾಗಿ ... ಅನುಗ್ರಹಿಸಿದನು ... ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ *ಕ್ರಿಸ್ತನ ದೇಹವು* ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.”

## “ಕ್ರಿಸ್ತನ ದೇಹವು” (1)

1 ಕೊರಿಂಥ 12:27

“ನೀವು *ಕ್ರಿಸ್ತನ ದೇಹವು,* ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.”

## “ಆತನ ದೇಹ” (3)

ಎಫೆಸ 1:22, 23

“ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು *ಆತನ ದೇಹವಾಗಿದೆ;* ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.”

ಎಫೆಸ 5:29, 30

“ಯಾರೂ ಎಂದೂ ಸ್ವಶರೀರವನ್ನು ಹಗೆಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ *ಆ ದೇಹವನ್ನು ಕ್ರಿಸ್ತನ* ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ.”

ಕೊಲೊಸ್ಸೆ 1:24

“ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ *ಆತನ ದೇಹ*ಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ.”

## "ದೇಹ" (4)

ಎಫೆಸ 3:6

"... ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ *ಒಂದೇ ದೇಹದೊಳಗಣ*[10] ಅಂಗಗಳೂ ... ಆಗಿದ್ದಾರೆಂಬುದೇ."

ಎಫೆಸ 5:23

"ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ *ದೇಹಕ್ಕೆ* ರಕ್ಷಕನಾಗಿದ್ದಾನೆ."

ಕೊಲೊಸ್ಸೆ 1:18

"ಸಭೆಯೆಂಬ *ದೇಹಕ್ಕೆ* ಆತನು ಶಿರಸ್ಸು; ಆತನು ಆದಿ ಸಂಭೂತನು ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ."

ಕೊಲೊಸ್ಸೆ 2:18, 19

"ಕೆಲವರು ಅತಿವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ ... ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ. ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ. ಆ ಶಿರಸ್ಸಿನಿಂದಲೇ *ದೇಹವೆಲ್ಲಾ* ಕೀಲುನರಗಳ ಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೂಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ಅಭಿವೃದ್ಧಿ ಯಾಗುತ್ತಾ ಬರುತ್ತದೆ."

## "ಒಂದೇ ದೇಹ" (5)

ರೋಮಾಪುರ 12:5

"ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ *ಒಂದೇ ದೇಹ*ವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ."

1 ಕೊರಿಂಥ 12:13

"ಯೆಹೂದ್ಯರಾಗಲೀ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ *ದೇಹವಾಗು*ವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು."

ಎಫೆಸ 2:14-16

"ನಿಮ್ಮನ್ನೂ ನಮ್ಮನ್ನೂ ಒಂದುಮಾಡಿದವನಾದ ಆತನೇ ನಮಗೆ ಸಮಾಧಾನಕರ್ತೃ ವಾಗಿದ್ದಾನೆ ... ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ *ಒಂದೇ ದೇಹದಂತಾಗ* ಮಾಡಿ ದೇವರೊಂದಿಗೆ ಸಮಾಧಾನ ಪಡಿಸಿದ್ದಾನೆ."

ಎಫೆಸ 4:4
"ನೀವೆಲ್ಲರೂ *ಒಂದೇ ದೇಹಕ್ಕೆ* ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು. ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು."

ಕೊಲೊಸ್ಸೆ 3:15
"ಕ್ರಿಸ್ತನಿಂದಾದ ಸಮಾಧಾನವು ನಿಮ್ಮ ಹೃದಯಗಳಲ್ಲಿ ಯಜಮಾನನಂತಿದ್ದು ತೀರ್ಪು ಹೇಳಲಿ; ನೀವು *ಒಂದೇ ದೇಹಕ್ಕೆ*ಸೇರಿದವರಾದದರಿಂದ ಸಮಾಧಾನದಿಂದಿರುವದಕ್ಕಾಗಿ ಕರೆಯಲ್ಪಟ್ಟಿರಿ."

ಟಿಪ್ಪಣಿಗಳು

[1]James S. Stewart, *A Man in Christ* (London: Hodder and Stoughton, 1947), 157. [2]The Nestle's Greek text reads "into Christ." [3]According to Nestle's Greek text, the passages in this section actually say "in the Christ." [4]The Nestle's Greek text has "in the Christ Jesus." [5]The Nestle's Greek text has "through Jesus." [6]NASBಯಲ್ಲಿ "in Him" ಎಂದಿದ್ದರೂ Nestle's Greek text ಗ್ರೀಕ ಪಠ್ಯದಲ್ಲಿ "in whom." [7]The Nestle's Greek text has "in whom also ... ." [8]NASBಯಲ್ಲಿ "in Him" ಎಂಬುದು ಈ ವಚನದಲ್ಲಿ ಎರಡು ಸಲ ಇದ್ದರೂ Nestle's Greek text "in whom" ಎಂದಿದೆ. [9]NASBಯಲ್ಲಿ "in Him" ಎಂದಿದ್ದರೂ Nestle's Greek text "in whom" ಎಂದಿದೆ. [10]The Nestle's Greek text has "joint-body."

© 2009 Truth for Today